ಬಿಟ್ಟು ಬಿಟ್ಟಿದ್ದ. ಯಾವಗಲೋ ಒಮ್ಮೆ ಅದು ರಾತ್ರಿಯಲ್ಲೆ ಬಂದು ರಾತ್ರಿಯಲ್ಲೆ ಹೊರಟುಬಿಡುತ್ತಿದ್ದ.

2

ಪಾರ್ವತಿ ಪಕ್ಕದಲ್ಲಿ ಯಾರೋ ಒಬ್ಬ ಮಿಸುಕಾಡುತ್ತಿದ್ದ. ರಾಮು ನಿದ್ದೆಗಣ್ಣಲ್ಲೆ ನೋಡಿದ. ಶಾಂತ ಪಕ್ಕದಲ್ಲಿ ಮಲಗಿದ್ದಳು. ಯಾರು ಬಂದಿದ್ದು ಇಷ್ಟು ಹೊತ್ತಲ್ಲಿ ಅಂತ ಕಣ್ಣು ಉಜ್ಜುತ್ತ ಸುತ್ತಲೂ ನೋಡಿದ. ಇನ್ನೂ ಬೆಳಕು ಹರಿದಿರಲಿಲ್ಲ. ಕತ್ತಲಲ್ಲೆ ಕಣ್ಣು ಹೊಂದಿಸಿಕೊಂಡು ನೋಡಿದ. ಗುಸುಗುಸು ಪಿಸುಪಿಸು ಜೊತೆಗೆ ಮುನುಗಾಟ ನಡೆದಿತ್ತು. ರಾಮು ತಲೆತುರಿಸಿಕೊಳ್ಳುತ್ತ, ಯಾರನ ಇರಲಿ ನೋಡೆ ಬಿಡೋಣ ಅಂತ ಎದ್ದು ಬಚ್ಚಲಮನಿಗೆ ಹೋಗಿ ಕಾಲುಮಡಿದು ಬಂದು ಲೈಟ್ ಹಾಕಿದ. ಪಾರ್ವತಿ ಗೊರಕೆ ಹೊಡೆಯುತ್ತಿದ್ದಳು. ಅಸ್ತವ್ಯಸ್ತವಾದ ಸೀರೆ, ಜಾರಿ ಬಿದ್ದ ಸೆರಗು, ಬಾಯಿ ತೆರೆದುಕೊಂಡು ಗೊರ್ ಗೊರ್ ಅಂತ ನಿದ್ದೆ ಮಾಡುತ್ತಿದ್ದಳು. ಶಾಂತ ದೂರದಲ್ಲಿ ಮೈತುಂಬ ಹೊದ್ದುಕೊಂಡು ಮಲಗಿದ್ದಳು. ತನಗೆ ಈ ಸ್ವಲ್ಪ ಹೊತ್ತು ಮುಂಚೆ ಅನಿಸಿದ್ದು ಭ್ರಮೇನ ಅಂತ ಕಳವಳಗೊಂಡು ಮುಸುಗೆಳೆದುಕೊಂಡು ಮಲಗಿದ.

ಬೆಳಿಗ್ಗೆ ಎದ್ದು ಕಣ್ಣು ಬಿಟ್ಟಾಗ ಆಗಲೇ ಸೂರ್ಯನ ಬಿಸಿಲು ರಂಗೇರಿತ್ತು. 'ರಾಮು, ಎಷ್ಟು ಎದ್ದೇಳಿಸೋದು. ರಾತ್ರಿ ಜಲ್ದಿ ಮಕ್ಕಾ ಅಂದ್ರೆ ಆ ಹಾಳಾದ ಟೀವಿ ನೋಡ್ಕಾಂತ, ಅದೇನೋ ಚಿತ್ರ ಬರಕಂತ ರಾತ್ರಿಯೆಲ್ಲ ಎದ್ದಿರ್ತೀಯ, ಈಗ ನೋಡಿದ್ರೆ ಸಾಲಿಗೆ ಹೊತ್ತಾದ್ರೂ ಎದ್ದು ರೆಡಿಯಾಗಲ್ಲ, ಎದ್ದೇಳು ಎದ್ದೇಳು' ಅಂತ ರಾಮುವಿನ ಅಕ್ಕ ಅವನ ಹಾಸಿಗೆ ಮಡಚುತ್ತಾ ನಿಂತಳು. 'ಅಕ್ಕ ನಿನ್ನೆ ರಾತ್ರಿ...' ಅಂತ ಕಣ್ಣುಜ್ಜಿಕೊಳ್ಳುತ್ತ ಏನೋ ಹೇಳೋಕೆ ಬಂದ. ಹಾಸಿಗೆ ಮಡಚುತ್ತಿದ್ದವಳು 'ಏನ್ ನಿನ್ನೆ ರಾತ್ರಿ' ಅಂತ ಕಣ್ಣು ದೊಡ್ಡದು ಮಾಡಿ ಕೇಳಿದಳು. 'ಏನಿಲ್ಲ ಏನಿಲ್ಲ' ಅಂತ ರಾಮು ಗೊಣಗುತ್ತ ಬಚ್ಚಲ ಮನಿಗೆ ಹೋಗಿ ತನ್ನ ಸಾಮಾನು ತೆಗೆದು ಚಳ್ಳ ಅನ್ನುವಂಗಾ ಗೋಡೆಗೆ ದೊಡ್ಡದೊಂದು ವೃತ್ತ ಮಾಡಿ, ಅದರ ತುಂಬ ಬಣ್ಣ ತುಂಬಿಸುವಂಗಾ ತುಂಬಿ ಖಾಲಿ ಮಾಡಿದ. 'ಏನ್ ಇದು ಅಸಹ್ಯ, ಹಂಗಾ ಮಾಡಬೇಡ ಅಂತ ಎಷ್ಟು ಸಲ ಹೇಳಿನಿ, ಮಾರೀ ಮ್ಯಾಲ ಮೀಸೆ ಬರಾಕ ಆಗ್ಯಾವ, ಸ್ವಲ್ಪಾನ ನಾಚಿಕೆ ಇಲ್ಲೇನು' ಅಂತ ಪಾರ್ವತಿ ಬೈದಳು. ಸರಕ್ಕನೆ ತನ್ನ ಸಾಮಾನನ್ನು ಚಡ್ಡಿಯೊಳಗೆ ಹಾಕಿಕೊಂಡು, 'ಅಮ್ಮ, ನಾನು ನಿನಗಾ ಏನೋ ಒಂದು ಕೇಳಬೇಕು?' ಅಂದ. 'ಏನು?' ಅಂತ ಆಕಿನೂ ಹುಬ್ಬು ಏರಿಸಿ, ನಡುವಿನ ಮೇಲೆ ಕೈಇಟ್ಟು ಕೇಳಿದಳು. ರಾಮು 'ಏನಿಲ್ಲ ಮರೆತುಹೊಯ್ತು' ಅಂತ ತಲೆತುರಿಸುತ್ತ ನಿಂತ. 'ಜಲ್ದಿ ರೆಡಿಯಾಗು, ಈ ವರ್ಷ ಏಳನತ್ತದು ಇದೀ, ಅದೇನೋ ದೊಡ್ಡ ಪರೀಕ್ಷೆ ಐತೆ ಅಂತಲ್ಲ, ಮೊನ್ನೆ ಲಚುಮಣ್ಣ ಮಾಷ್ಟ್ರ ಸಿಕ್ಕಾಗ ಹೇಳಿದ್ರು, ನೀ ಸರಿಯಾಗಿ ಓದಲ್ಲ, ಬಾಳಾ ಬೆರಕಿ ಇದಾನ ಅಂತಿದ್ರು' ಅಂದಳು. ರಾಮು ಮರುಮಾತಾಡದೆ ಹೊರಗೋಡಿ ಬೇನಿಕಡ್ಡಿ ತಗೊಂಡು ಹಲ್ಲುಜ್ಜುತ್ತ ನಿಂತ.

3

ರಾಮು ಶಾಲೆಯಲ್ಲಿ ತನ್ನ ಗೆಳೆಯ ಅಂಬ್ರಯ್ಯನ ಹೆಗಲಮ್ಯಾಲ ಕೈಹಾಕಿಕೊಂಡು ನಿಂತುಕೊಂಡಿದ್ದಾಗ, ಲಚುಮಣ್ಣ ಮಾಷ್ಟ್ರ 'ರಾಮ್ಯಾ, ಅಂಬ್ರ್ಯಾ... ಈ ಸಲದ ನಿಮ್ಮ ಊರಿನ ಮಲ್ಲಯ್ಯತಾತನ ಜಾತ್ರೆಗೆ ನಿಮ್ಮ ಅಕ್ಕಂದಿರನ ಕರಕಂಡು ಬರಲ್ಲೇನು' ಅಂತ ಅಂದ್ರು. ಅವರು ಅಷ್ಟು ಹೇಳಿದ್ದೆ ತಡ ಈ ಅಂಬ್ರಯ್ಯ 'ಸಾರ್, ನಮ್ಮಪ್ಪ ಹೋಗಿ ಕರಕಂಡು ಬಂದಾನ, ಹಂಗೆ ಇವನಕ್ಕನೂ ಬಂದಾಳ' ಅಂದ. ಅಷ್ಟರಲ್ಲಿ ಬಂದ ನಾಗಪ್ಪ ಮಾಷ್ಟ್ರ 'ಹೌದಾ, ನಮ್ಮ ಕೈಯಲ್ಲಿ ಕಲಿತ ಹುಡುಗಿಯರು ಎಷ್ಟು ದೊಡ್ಡವರಾಗಿ ಗಂಡನ ಮನೆಗೆ ಹೋಗ್ಯಾರ, ಚೋಲಾತು ಚೋಲಾತು' ಅಂತ ಲಚುಮಣ್ಣ ಮಾಷ್ಟ್ರ ಮುಖ ನೋಡಿ ನಕ್ಕಂತ ಹೋದರು. ರಾಮುವಿನ ಮೈಯೆಲ್ಲ ಮುಳ್ಳು ಎದ್ದಾಂಗಾಗಿ ಅಂಬ್ರ್ಯಾನ ಹೆಗಲ ಮೇಲಿನ ಕೈ ತೆಗದು ಶಾಲೆ ಒಳಗೆ ಹೋಗಿ ಯಾವುದೋ ಕಾಪೀ ತೆಗೆದು ಏನೇನೋ ಚಿತ್ರ ಗೀಚತೊಡಗಿದ. ಹಿಂದೊಮ್ಮೆ ಇದೇ ಲಚುಮಣ್ಣ ಮಾಷ್ಟ್ರ ಚಿನ್ನೂರು ಸಂತೆಯಲ್ಲಿ ಸಿಕ್ಕಾಗ, 'ಏನ್ ಪಾರ್ವತಮ್ಮ ಮಕ್ಕಳನ್ನು ಕರಕಂಡು ಸಂತಿಗೆ ಬಂದಿದ್ದೀಯಾ?' ಅಂದರು. 'ನಮಸ್ಕಾರ ಮಾಷ್ಟ್ರೆ, ಮೊನ್ನೆ ಗಂಡನ ಮನಿಂದ ಬಂದಾಳ ರೀ ಮಗ್ಳು. ಇವ್ನು ಬ್ಯಾಡ ಅಂದ್ರು ನಮ್ ಹಿಂದ ಓಡಿ ಬಂದಾನ್ರೀ' ಅಂದಳು ಪಾರ್ವತಿ. 'ಸರಿ ಸರಿ... ಏನವ್ವಾ ಶಾಂತ ಆರಾಮ ಇದೀ, ಗಂಡನ ಮನೇಲಿ ಹೊಂದಿಕೊಂಡು ಹೋಗಬೇಕವ್ವೋ, ಸಂಸಾರ ಚಲೋ ಮಾಡು. ನಿಮ್ಮ ಅಮ್ಮ ಕಷ್ಟಪಟ್ಟು ನಿಮ್ನ ಬೆಳಸಿದ್ದಕ್ಕೂ ಸಾರ್ಥಕ ಆಗ್ತದೆ' ಅಂತ, ಶಾಂತನ ಎದೆ ದಿಟ್ಟಿಸುತ್ತ ನಿಂತರು. ರಾಮು